ಅತ್ತ ಶ್ರೀಮುಖ ನಡುರಾತ್ರಿಯ ವೇಳೆಗೆ 'ಬೆಂಗಳೂರಿಗೆ ಬರುತ್ತೇನೆ. ಕೆಲಸ ಹುಡುಕು' ಎಂದು ಮೆಸೇಜು ಮಾಡಿದ್ದ. ಬೆಳಗ್ಗೆ ಬಿಸಿ ಬಿಸಿ ಕಾಫಿಯ ಸಮೇತ ಈ ಸುದ್ದಿಯನ್ನೂ ಅಣ್ಣನಿಗೆ ಕೊಟ್ಟಾಗ ಅವನ ಕಣ್ಣಲ್ಲೂ ಹುಣ್ಣಿಮೆ ಹೊಳೆಯಿತು. 'ಒಳ್ಳೇದಾಗಲಿ ಪುಟ್ಟ' ಎಂದು ಅವಳ ತಲೆಯ ಮೇಲೆ ಕೈಯಾಡಿಸಿದ. ಅವನ ಆಶೀರ್ವಾದವ ತನ್ನೊಳಗಿಳಿಸಿಕೊಂಡ ಅವಳು ಮಹಾನಗರಿಗೆ ಹೊರಡಲು ಅಣಿಯಾಗತೊಡಗಿದಳು.

ಇತ್ತ ಶ್ರೀಮುಖ ಬೆಂಗಳೂರಿಗೆ ಹೊರಡುವ ತಯಾರಿ ಮಾಡಿಕೊಳ್ಳುತ್ತಿದ್ದ. ಬೆಳಿಗ್ಗೆಯೇ ಹೋಗಿ ಒಂದು ತಿಂಗಳಿಗಾಗುವಷ್ಟು ಸಾಮಾನು ತಂದು ಅಂಗಡಿಗೆ ಹಾಕಿದ. ಇಡೀ ಅಂಗಡಿಯನ್ನೇ ಒಮ್ಮೆ ಒರೆಸಿ, ಗುಡಿಸಿ, ಸ್ವಚ್ಛ ಮಾಡಿದ. ಎಲ್ಲ ಸಾಮಗ್ರಿಗಳನ್ನೂ ತೆಗೆದು, ಒಪ್ಪವಾಗಿ ಕೂಡಿದ. ಗೋಡೆಯಲ್ಲಿದ್ದ ಅಪ್ಪನ ಫೋಟೊ ತೆಗೆದು ಒರೆಸಿ, ಹೂ ಏರಿಸಿದ. ಬ್ಯಾಂಕಿನಿಂದ ಐದು ಸಾವಿರ ತೆಗೆದು ಅಮ್ಮನಿಗೆ ಕೊಟ್ಟ. ಪಕ್ಕದ ಮಹಾಬಲಣ್ಣ, ಸುಮಿತ್ರಕ್ಕನ ಮನೆಗೆ ಹೋಗಿ, 'ಅಮ್ಮ ಒಬ್ಬೇ. ಸ್ವಲ್ಪ ನೋಡ್ತಿರಿ' ಎಂದ. ತೀರಾ ಮಧ್ಯಾಹ್ನದ ಹೊತ್ತಿಗೆ ಬ್ಯಾಗು ತುಂಬಿಸಿಕೊಳ್ಳುವಾಗ ಮಾತ್ರ ಯಾವುದನ್ನು ತೆಗೆದುಕೊಳ್ಳಬೇಕು, ಯಾವುದನ್ನು ಬಿಡಬೇಕು ಎಂಬುದೇ ಅರ್ಥವಾಗದೇ ಮಿಕಿ ಮಿಕಿ ನೋಡಿದ. ಯೋಚಿಸಿ, ಒಂದೊಂದಾಗಿ ಹುಡುಕಿ ಬ್ಯಾಗಿಗಿಟ್ಟುಕೊಳ್ಳುತ್ತಾ ಹೋದವನು ಅಪ್ಪನ ಫೋಟೊದೆದುರು ತಲುಪಿ ಥಟ್ಟನೆ ನಿಂತುಬಿಟ್ಟ. ಅದನ್ನು, ಅದರೊಳಗಿನ ಅಪ್ಪನನ್ನು, ಅವನು ಬಿಟ್ಟುಹೋದ ಕನಸನ್ನು, ಅದರ ಭಾಗವೇ ಆಗಿರುವ ಅಮ್ಮನನ್ನು... ಇವನ್ನೆಲ್ಲ ಹೇಗೆ ತುಂಬಿಕೊಳ್ಳಲಿ? ಹೇಗೆ ಕೊಂಡಯ್ಯಲಿ? ಎಂಬಂತೆ ನಿರುಪಾಯನಾಗಿ ನಿಂತುಬಿಟ್ಟ.

ಸಂಜೆಯಾಯಿತು. ಇಲ್ಲಿ, ಹಸಿರುಮಕ್ಕಿಯಲ್ಲಿ ಕೊನೆಯ ಲಾಂಚು ದಡದಂಚಿಗೆ ಬಂದು ನಿಂತಿತು. ಅಲ್ಲಿ ಬೆಂಗಳೂರಿನ ರೈಲು ಮೈಸೂರು ನಿಲ್ದಾಣಕ್ಕೆ ಬಂತು. ಮನೋಹರಿ ಅಣ್ಣನಿಗೆ ಕೈ ಬೀಸಿದಳು. ಶ್ರೀಮುಖ ಅಮ್ಮನನ್ನು ತಬ್ಬಿಕೊಂಡ. ಅವಳು ರೈಲಿನ ಮೆಟ್ಟಿಲೇರಿದಳು. ಇವನು ಲಾಂಚಿನ ಬೆಂಚಿನ ಮೇಲೆ ಕುಳಿತ. ರೈಲು ಕೂಂ ಎನ್ನುತ್ತಾ ಹೊರಟಿತು. ಲಾಂಚಿನ ಎಂಜಿನ್ನುಗಳು ಗುರ‍್ರೆಂದವು. ರೈಲಿನ ಕಿಟಕಿಯ ಹೊರಗೆ ಹೊಲಗದ್ದೆಗಳು ಈ ಕ್ಷಣದ ಪ್ರತೀಕದಂತೆ ಹಿಂದಕ್ಕೋಡಿದವು. ಲಾಂಚಿನ ಕಾಲಡಿಗಿನ ನೀರು ಹಿಂದೆ ಹಿಂದೆ ಚಿಮ್ಮಿತು. ದೂರದ ಎರಡು ಬೇರೆ ಬೇರೆ ಬಿಂದುಗಳಿಂದ ಹೊರಟ ಅವರಿಬ್ಬರೂ ಒಂದೇ ಗಮ್ಯದತ್ತ ಮುನ್ನಡೆಯತೊಡಗಿದರು. ಕಿಟಕಿಯಿಂದ ಹಿತವಾಗಿ ಬೀಸಿ ಬರುತ್ತಿದ್ದ ತಂಗಾಳಿಗೆ ಮುಖವೊಡ್ಡಿದಳು ಮನೋಹರಿ. ಶ್ರೀಮುಖ ಸೋಕುವ ಗಾಳಿಯಲ್ಲಿನ ನೀರಿನ ಘಮಲನ್ನು ಒಳಗಿಳಿಸಿಕೊಳ್ಳುತ್ತಿದ್ದ.

'ಮುಂದೊಂದು ದಿನ...'

ತನ್ನಷ್ಟಕ್ಕೆ ತಾನೇ ಎಂಬಂತೆ ಅವಳು ಹೇಳಿಕೊಂಡಳು.

'ಮುಂದೊಂದು ದಿನ...'

ಇವನು ತನ್ನೊಳಗೇ ಯೋಚಿಸಿದ.

'ಇಬ್ಬರೂ ದುಡಿಯುತ್ತೇವೆ. ಹಣ ಉಳಿಸುತ್ತೇವೆ. ಶ್ರೀಯನ್ನು ಒಪ್ಪಿಸಿ ಮೈಸೂರಿನಲ್ಲೊಂದು ಪುಟ್ಟ ಮನೆ ಮಾಡುತ್ತೇನೆ. ಶ್ರೀ ಹಾಗೂ ಅಮ್ಮನ ಜೊತೆಗೆ, ಅಣ್ಣನ ಸಮೀಪದಲ್ಲಿ ನನ್ನ ಉಳಿದ ಬಾಳನ್ನು ಕಳೆಯುತ್ತೇನೆ...' ಮುಂಗುರುಳ ಸೋಕುತ್ತಿದ್ದ ತಂಗಾಳಿಗೆ ಹೇಳುತ್ತಿರುವಂತೆ ಅವಳು ಹೇಳಿಕೊಂಡಳು.

'ದುಡಿಯುತ್ತೇನೆ. ಹಣ ಮಾಡುತ್ತೇನೆ. ಎರಡೆಕರೆ ತೋಟ ಕೊಳ್ಳುತ್ತೇನೆ. ಮತ್ತೆ ಇದೇ ದಡಕ್ಕೆ ಮರಳುತ್ತೇನೆ. ಈಗಿರುವ ಅಂಗಡಿಯನ್ನು ದೊಡ್ಡ ಮಾಡಿ ನನ್ನ ಉಳಿದ ಬದುಕನ್ನು ಅಮ್ಮ, ಮನೋಹರಿಯ ಜೊತೆ ಕಳೆಯುತ್ತೇನೆ... ನಮ್ಮ ಜೊತೆಗೆ ಅಪ್ಪ ಕೂಡಾ ಇರುತ್ತಾನೆ' ದಿಗಿಲು ಬಿದ್ದ ಮನಸ್ಸನ್ನು ಸಂಭಾಳಿಸುವಂತೆ ತನ್ನಷ್ಟಕ್ಕೆ ತಾನೇ ಶ್ರೀಮುಖ ಗುನುಗಿಕೊಂಡ.

ಕಿಟಕಿಯ ಹೊರಗೆ ಓಡುತ್ತಿದ್ದ ಗಿಡ, ಮರ, ಹೊಲಗಳಾಚೆ ಮೈಸೂರು ಮರೆಯಾಯಿತು. ಇತ್ತ ತೇಲುವ ದೋಣಿಯ ಮುಂದೋಡುವಿಕೆಗೆ ಆಚೆಯ ತೀರ ಹತ್ತಿರ ಹತ್ತಿರವಾಯಿತು. ಆಚೆ ದಡದಲ್ಲಿ ನಿಂತಿರುವ ತನ್ನ ಪುಟ್ಟ ಅಂಗಡಿ... ಅಪ್ಪ ಕಷ್ಟ ಪಟ್ಟು ನಡೆಸಿದ ಅಂಗಡಿ... ಅದು ಮುಗಿದ ಕಥೆಯ ಕೊನೆಯ ಪುಟದ ಚಿತ್ರದಂತೆ ಒಮ್ಮೆ, ಶುರುವಾಗಲಿರುವ ಕಾದಂಬರಿಯ ಮುಖಪುಟದಂತೆ ಇನ್ನೊಮ್ಮೆ ಕಾಣುತ್ತಾ ದೂರವಾಗುತ್ತಾ ಹೋಯಿತು. ಹಿನ್ನೆಲೆಯಲ್ಲಿ ಸೂರ್ಯ ಎಲ್ಲವನ್ನೂ ಕೆಂಪಾಗಿಸುತ್ತಾ, ನಾಳೆಯೆಂಬ ಗುಟ್ಟನ್ನು ಮತ್ತಷ್ಟು ನಿಗೂಢವಾಗಿಸುತ್ತಾ ಮುಳುಗಿಹೋದ. ●